## ನಾಗರಿಕರಾಗಿ ನಾವೇನು ಮಾಡಬಹುದು?

- ಮನೆಯಿಂದ ಹೊರಡುವಾಗ ಜೊತೆಗೊಂದು ಮೀಡಿಯಂ ಸೈಜ್‌ನ ಬಟ್ಟೆಯ ಗಟ್ಟಿಯಾದ ಕೈಚೀಲ ಸದಾ ಇರಲಿ. ವಾಹನ ಬಳಸುವವರು ಎರಡರಿಂದ ಮೂರು ಬ್ಯಾಗ್‌ಗಳನ್ನು ಇಟ್ಟುಕೊಳ್ಳಿ. ಕೊಂಡ ಸಾಮಾನುಗಳನ್ನು ಅವುಗಳಲ್ಲೇ ತುಂಬಿಸಿಕೊಂಡು ಮನೆಗೆ ತನ್ನಿ.
- ಸಾಮಾನಿನ ಜೊತೆ ಬರುವ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಹರಿಯುವವರೆಗೆ ಪದೇ ಪದೇ ಉಪಯೋಗಿಸಿ.
- ಯಾವುದೇ ಕಾರಣಕ್ಕೂ ಪ್ಲಾಸ್ಟಿಕ್ ಸುಡಬೇಡಿ. ಸುಟ್ಟಾಗ ವಿಷಯುಕ್ತ ಕಾರ್ಸಿನೋಜೆನ್‌ಗಳು ಬಿಡುಗಡೆಯಾಗಿ ವಾತಾವರಣದ ಗಾಳಿಯನ್ನು ವಿಷಮಯಗೊಳಿಸುವುದಲ್ಲದೆ ಉಸಿರಾಟದ ತೊಂದರೆ ಉಂಟು ಮಾಡುತ್ತದೆ.
- ಅಗತ್ಯವಿದ್ದಷ್ಟು ಪ್ಲಾಸ್ಟಿಕ್ ವಸ್ತುಗಳನ್ನು ಮಾತ್ರ ಕೊಳ್ಳಿ. ಒಂದು ಕೊಂಡರೆ ಇನ್ನೊಂದು ಫ್ರೀ ಅಥವಾ ಸೋವಿ ಎಂಬ ಕಾರಣಕ್ಕೆ ಹೆಚ್ಚು ಹೆಚ್ಚು ಖರೀದಿಸಬೇಡಿ.
- ಯಾವ ಪ್ಲಾಸ್ಟಿಕ್ ಉತ್ತಮ ಮತ್ತು ಪರಿಸರಸ್ನೇಹಿ ಅಥವಾ ರೀ–ಸೈಕಲ್ ಮಾಡಬಹುದು ಎಂಬುದರ ತಿಳಿವಳಿಕೆ ಪಡೆದು ಖರೀದಿಸಿ.
- ಉಪಯೋಗಿಸಿದ ನಂತರ ಇತರೆ ಕಸದಿಂದ ಬೇರ್ಪಡಿಸಿ ಅದನ್ನು ಸಂಗ್ರಹಿಸಲು ಬರುವವರ ಕೈಗೆ ತಲುಪಿಸಿ. ಎಲ್ಲೆಂದರಲ್ಲಿ ಬಿಸಾಡಬೇಡಿ.
- ಎಲ್ಲವನ್ನೂ ಸರ್ಕಾರವೇ ಮಾಡಲಿ ಎಂದು ಕಾಯುತ್ತ ಕೂರಬೇಡಿ. ನೀವು ವಾಸಿಸುವ ಬಡಾವಣೆಗಳಲ್ಲಿ ಪ್ಲಾಸ್ಟಿಕ್ ಅಪಾಯಗಳ ಕುರಿತು ಜಾಗೃತಿ ಮೂಡಿಸಿ. ಸ್ವಯಂಸೇವಕರಾಗಿ ಮನೆಮನೆಗೂ ತೆರಳಿ ಪ್ಲಾಸ್ಟಿಕ್ ಕಸ ಸಂಗ್ರಹಿಸಿ, ಸರಿಯಾಗಿ ವಿಲೇವಾರಿ ಮಾಡುವ ಸಂಘಟನೆಗಳ ಜೊತೆ ಕೈಜೋಡಿಸಿ.
- ನಿಷೇಧಿತ ಪ್ಲಾಸ್ಟಿಕ್ ಮಾರಾಟ ಮಾಡುವ ಅಂಗಡಿಗಳ ವಿರುದ್ಧ ದೂರು ಸ್ವೀಕರಿಸಿ ಕಾರ್ಯಕೈಗೊಳ್ಳುವ ಸಂಸ್ಥೆಗಳಿಗೆ ದೂರು ನೀಡಿ. ಬಿಬಿಎಂಪಿ, ಗ್ರಾಮ ಪಂಚಾಯಿತಿ, ಅಂಗನವಾಡಿ ಕೇಂದ್ರ, ರೈಲ್ವೆ ಪೊಲೀಸು, ಮಾಲಿನ್ಯ ನಿಯಂತ್ರಣ ಮಂಡಳಿಯವರು ದೂರು ಸ್ವೀಕರಿಸಬಹುದು.

ಬಾರಿ ಉಪಯೋಗಿಸಿ ಎಸೆಯಲಾಗುತ್ತದೆ. ಇದರ ರೀ–ಸೈಕಲ್ ತೀರಾ ಕಷ್ಟದಾಯಕ. ಇದೇ ಇಡೀ ವಿಶ್ವವನ್ನು ಕಾಡುತ್ತಿರುವ ಅತ್ಯಂತ ದೊಡ್ಡ ಪ್ರಮಾಣದ ಪ್ಲಾಸ್ಟಿಕ್ ಕಸ.

**ಪಾಲಿ ಪ್ರೊಪಿಲಿನ್ (PP)**

ಹಗುರ ಮತ್ತು ಅತ್ಯಂತ ಗಟ್ಟಿಯಾದುದರಿಂದ ಬಾಟಲಿನ ಮುಚ್ಚಳ, ಬಕೆಟ್, ಕಸಬರಿಗೆ ಹಿಡಿ, ಹೀರು ಕೊಳವೆ, ಬಾಕ್ಸ್, ಕಟ್ಟಲು ಬಳಸುವ ಹಗ್ಗ ತಯಾರಿಕೆಯಲ್ಲಿ ಇದನ್ನು ಬಳಸುತ್ತಾರೆ. ವಿಶ್ವದ ಒಟ್ಟು ಉತ್ಪಾದನೆಯಲ್ಲಿ ಕೇವಲ ಶೇ. 7 ಮಾತ್ರ ರೀ–ಸೈಕಲ್ ಆಗುತ್ತದೆ ಎಂಬ ಮಾಹಿತಿ ಇದೆ. ಅಲ್ಲದೆ ಇವುಗಳನ್ನು ಪುನರ್‌ಬಳಕೆ ಮಾಡುವ ಸಾಧ್ಯತೆ ಹೆಚ್ಚಿರುವುದರಿಂದ ರೀ–ಸೈಕಲಿಂಗ್‌ನ ಪ್ರಮಾಣ ಕಡಿಮೆ ಎಂದೇ ಹೇಳಬಹುದು.

**ಪಾಲಿಸ್ಟಿರಿನ್ (PS)**

ಇದು ಅತ್ಯಂತ ಕಡಿಮೆ ಬೆಲೆಯ ಹಾಗೂ ಹಗುರವಾದ ಪ್ಲಾಸ್ಟಿಕ್. ಕುಡಿದು ಎಸೆಯುವ ನೀರಿನ ಲೋಟ, ಮೊಟ್ಟೆ ಇಡಲು ಬಳಸುವ ಪೆಟ್ಟಿಗೆ, ಪಿಕ್‌ನಿಕ್ ಚಮಚ, ಬಟ್ಟಲು, ಪ್ಲೇಟುಗಳು, ಎಲೆಕ್ಟ್ರಾನಿಕ್ ವಸ್ತುಗಳು ಅಲುಗಾಡದಂತೆ ತಡೆಯಲು ಇಡುವ ಥರ್ಮೋಕೋಲ್ ತುಂಡುಗಳಲ್ಲಿ ಇದರ ಬಳಕೆ ಅತ್ಯಂತ ಹೆಚ್ಚು. ಇದು ಸುಲಭವಾಗಿ ಮುರಿದು ಹೋಗುವುದರಿಂದ ಬಳಸಿದ ಮರುಕ್ಷಣವೇ ಚಿಕ್ಕ ಚಿಕ್ಕ ತುಂಡುಗಳಾಗಿ ವಾತಾವರಣದಲ್ಲಿ ಹರಡಿಹೋಗುತ್ತದೆ. ವಿಶ್ವದ ಯಾವುದೇ ಸಮುದ್ರದಂಡೆಗೆ ಹೋದರೂ ಇವು ಕಾಣಸಿಗುತ್ತವೆ. ಇವು ಸಾಗರಗಳ ಜಲಚರಗಳ ಹೊಟ್ಟೆ ಸೇರಿ ಅವುಗಳನ್ನು ಕಾಯಿಲೆಗೆ ತಳ್ಳುತ್ತವೆ. ಇದರಲ್ಲಿ ಆಹಾರವನ್ನಿಟ್ಟು ಮೈಕ್ರೋವೇವ್‌ನಲ್ಲಿ ಬಿಸಿ ಮಾಡಿದರೆ ಸ್ಟಿರಿನ್ ಬಿಡುಗಡೆಯಾಗಿ ಆಹಾರವನ್ನು ವಿಷಗೊಳಿಸುತ್ತದೆ. ಇದರ ರೀ–ಸೈಕಲ್‌ನ ಪ್ರಮಾಣ ಅತ್ಯಂತ ಕಡಿಮೆ.

**ಪಾಲಿಕಾರ್ಬನೇಟ್, ಲೆಕ್ಸಾನ್ ಇತ್ಯಾದಿ**

ಕಂದಮ್ಮಗಳು ಹಾಲು ಕುಡಿಯಲು ಬಳಸುವ ಬಾಟಲ್, ನಿಪ್ಪಲ್, ನೀರಿನ ಕೂಲರ್‌ಗಳು, ಬಾಗಿಲುಗಳಿಗೆ ಹಾಕುವ ಅಕ್ರಲಿಕ್ ಹಾಳೆ, ಕಾರಿನ ಒಳ ಬಿಡಿ ಭಾಗಗಳಲ್ಲಿ ಬಳಸುವ ಈ ಪ್ಲಾಸ್ಟಿಕ್‌ನಲ್ಲಿ ಪಾಲಿಕಾರ್ಬನೇಟ್‌ಗಳಿರುತ್ತವೆ. ಇದರಲ್ಲಿರುವ ಬಿಸ್ಫೆನಾಲ್–ಎ ಎಂಬ ರಾಸಾಯನಿಕ ಮನುಷ್ಯ ಹಾಗೂ ಪ್ರಾಣಿಗಳ ನಿರ್ನಾಳ ಗ್ರಂಥಿಗಳ ಸ್ರವಿಕೆಯಲ್ಲಿ ಏರುಪೇರುಂಟು ಮಾಡುತ್ತವೆ.

ಪಾಲಿಕಾರ್ಬನೇಟ್ ಹೊಂದಿರುವ ಯಾವುದೇ ಉತ್ಪನ್ನದ ತಳದಲ್ಲಿ PC#7 ಎಂಬ ಬರಹ ಇದ್ದೇ ಇರುತ್ತದೆ. ಇದನ್ನು ಮರು ಬಳಸಬಾರದು. ಜೊತೆಗೆ (PLA (Polyactic acid) ಎಂಬ ಬರಹವಿದ್ದರೆ ಅದನ್ನು ಮಿಶ್ರಗೊಬ್ಬರವಾಗಿ ಪರಿವರ್ತಿಸಬಹುದು ಮತ್ತು ಯಾವುದೇ ಕಾರಣಕ್ಕೂ ರೀ–ಸೈಕಲಿಂಗ್ ಮಾಡಬಾರದು.

## ಪ್ಲಾಸ್ಟಿಕ್ ಮತ್ತು ಕಾನೂನು

ಭಾರತದ 25 ರಾಜ್ಯಗಳಲ್ಲಿ ಒಮ್ಮೆ ಉಪಯೋಗಿಸಿ (Single Use) ಎಸೆಯುವ ಪ್ಲಾಸ್ಟಿಕ್‌ನ ಮೇಲೆ ನಿಷೇಧವಿದೆ. ಕರ್ನಾಟಕ ಮತ್ತು ಪಂಜಾಬ್‌ಗಳಲ್ಲಿ 2016ರಿಂದಲೇ ನಿಷೇಧ ಜಾರಿಯಲ್ಲಿದೆಯಾದರೂ ಅದರ ಅನುಷ್ಠಾನ

